## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 937 |
| 2. | ಸದಸ್ಯರ ಹೆಸರು | : | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ |
| 3. | ಉತ್ತರಿಸಬೇಕಾದ ದಿನಾಂಕ | : | 18.12.2018 |
| 4. | ಉತ್ತರಿಸಬೇಕಾದ ಸಚಿವರು | : | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಬೀದರ್‌ನ ಬ್ರೀಮ್ಸ್ ನೂತನ ಆಸ್ಪತ್ರೆಯ ಕಟ್ಟಡ ಕಾಮಗಾರಿ ಮುಗಿಯುವ ಮುನ್ನವೆ ಛಾವಣಿ ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಬೀದರ್ ನಗರದ ಬ್ರಿಮ್ಸ್ ನೂತನ ಆಸ್ಪತ್ರೆ ಕಟ್ಟಡದಲ್ಲಿ ಯಾವುದೇ ಛಾವಣಿ ಕುಸಿತಗೊಂಡಿರುವುದಿಲ್ಲ. ಕಟ್ಟಡ ಕಾಮಗಾರಿ ಮುಗಿದ ಮೇಲೆ ವಿದ್ಯುತ್ ಲೈನ್ ಮತ್ತು ಫೈರ್ ಫೈಟಿಂಗ್ ಪೈಪ್ ಲೈನ್ ಅಳವಡಿಸಲು ಡ್ರಿಲ್ಲಿಂಗ್ ಯಂತ್ರ ಮುಖಾಂತರ ರಂಧ್ರಗಳು ಕೊರೆಯುವ ಸಮಯದಲ್ಲಿ ಉಂಟಾದ ವೈಬ್ರೇಷನ್‌ನಿಂದ ಸ್ವಲ್ಪ ಮಟ್ಟದ ಸೀಲಿಂಗ್ ಪ್ಲಾಸ್ಟರ್ (ಗಿಲಾವಾ)ನಲ್ಲಿ ಸೇರಿರುವ ವ್ಯಾಕ್ಯೂಮ್ ಬಿಡುಗಡೆಯಾಗಿರುವುದರಿಂದ ಸ್ಥಳದ ಪ್ಲಾಸ್ಟರ್ ಕಳಚಿ ಬಿದ್ದಿರುತ್ತದೆ. ಈಗಾಗಲೇ ಬಿದ್ದಿರುವ ಪ್ಲಾಸ್ಟರ್ ಅನ್ನು ದುರಸ್ತಿ ಮಾಡಿಸಲಾಗಿದೆ. |
| (ಆ) | ಹಾಗಿದ್ದಲ್ಲಿ 115 ಕೋಟಿ ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣವಾಗಿದ್ದು, ಇಂತಹ ಕಳಪೆ ಕಾಮಗಾರಿ ಕೈಗೊಳ್ಳಲು ಕಾರಣವೇನು; (ಸ್ಪಷ್ಟ ಮಾಹಿತಿ ನೀಡುವುದು) | ಸದರಿ ನೂತನ ಆಸ್ಪತ್ರೆ ಕಟ್ಟಡವನ್ನು ರೂ.110.09 ಕೋಟಿಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲಾಗಿದ್ದು, ಕಟ್ಟಡ ಕಾಮಗಾರಿ ಕಳಪೆಯಾಗಿರುವುದಿಲ್ಲ. |
| (ಇ) | ಇಂತಹ ಕಳಪೆ ಕಾಮಗಾರಿ ಕೈಗೊಂಡಿರುವ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಉದ್ಭವಿಸುವುದಿಲ್ಲ. |
| (ಈ) | ಪ್ರಸ್ತುತ ನೂತನ ಆಸ್ಪತ್ರೆ ಕಟ್ಟಡ ಹಾಗೂ ಅದರ ಸ್ಥಿತಿಗತಿಯ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದ; | ಬೀದರ್ ನಗರದ ಜಿಲ್ಲಾ ಆಸ್ಪತ್ರೆಯನ್ನು 300 ರಿಂದ 750 ಹಾಸಿಗೆ ಸಾಮರ್ಥ್ಯಕ್ಕೆ ಮೇಲ್ದರ್ಜೆಗೆರಿಸುವ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕಾಗಿ ರೂ. 87.70 ಕೋಟಿಗಳ ಅಂದಾಜು ಮೊತ್ತಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಇದರಲ್ಲಿ ಸರ್ಕಾರದ ಆದೇಶದ ದಿನಾಂಕ: 09/03/2018 ರಂದು ರೂ. 110.09 ಕೋಟಿಗೆ ಇಐಆರ್‌ಎಲ್ ಮತ್ತು ವರ್ಕ್‌ಸ್ಲಿಪ್ ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ಇಲ್ಲಿಯವರೆಗೆ ಒಟ್ಟು 98.00 ಕೋಟಿಗಳ ವೆಚ್ಚವನ್ನು ಮಾಡಲಾಗಿದೆ. |

| | | |
|---|---|---|
| | | ಸದರಿ ಕಟ್ಟಡದಲ್ಲಿ ಬೇಸ್‌ಮೆಂಟ್, ನೆಲಮಹಡಿ + 6ನೇ ಮಹಡಿ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು, ಈ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆಯಿಂದ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಸ್ತಾಂತರಿಸಿಕೊಳ್ಳಲಾಗಿದೆ.<br><br>ಗ್ಯಾಸ್ ಪೈಪ್ ಲೈನ್ ಮತ್ತು ಫೈರ್‌ಫೈಂಟಿಂಗ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಎಕ್ಸ್‌ಪ್ರೆಸ್ ಫೀಡರ್‌ಲೈನ್ ಕಾಮಗಾರಿಯು ಮುಗಿಯುವ ಹಂತದಲ್ಲಿರುತ್ತದೆ. |
| (ಉ) | ಪ್ರತಿ ದಿನ ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆ ಎಷ್ಟು; ಯಾವ ದಿನಾಂಕದಂದು ಯಾವ ಯಾವ ವೈದ್ಯರು ರೋಗಿಗಳಿಗೆ ಲಭ್ಯರಾಗಿರುತ್ತಾರೆ? ( ಮಾಹಿತಿ ಒದಗಿಸುವುದು) | ಪ್ರತಿದಿನ 1300-1350 ಹೊರ ರೋಗಿಗಳು ಹಾಗೂ 100 ಒಳರೋಗಿಗಳು ಸೇವೆ ಪಡೆದುಕೊಳ್ಳುತ್ತಿದ್ದಾರೆ. ಪ್ರತಿ ನಿತ್ಯ ಮೆಡಿಸನ್, ಸರ್ಜರಿ, ಆರ್ಥೋಪೆಡಿಕ್, ಮಕ್ಕಳ ರೋಗಗಳ ವಿಭಾಗ, ಪ್ರಸೂತಿ ಹಾಗೂ ಸ್ತ್ರೀ ರೋಗ ವಿಭಾಗ, ಚರ್ಮ ರೋಗ ವಿಭಾಗ, ಕಿವಿ, ಮೂಗು, ಗಂಟಲು ರೋಗಗಳ ವಿಭಾಗ, ಕಣ್ಣಿನ ರೋಗ ವಿಭಾಗ, ದಂತ ವಿಬಾಗ ಹಾಗೂ ಮನೋರೋಗ ವಿಭಾಗಗಳ ತಜ್ಞ ವೈದ್ಯರುಗಳು ವಿಭಾಗವಾರು ಲಭ್ಯವಿರುತ್ತಾರೆ. |

ಸಂಖ್ಯೆ: ಆಕುಕ 418 ಎಂಎಸ್‌ಎಫ್ 2018

(ಡಿ.ಕೆ.ಶಿವಕುಮಾರ್)
ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು